ದಿನಾಂಕಃ **21.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ

02. ಈ ದಾವೆಯನ್ನು ಯಾರು ಸಲ್ಲಿಸಿದ್ದಾರೆ ಮತ್ತು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಲಂಬಾಣಿ ಸಣ್ಯಾ ನಾಯ್ಕ ಇವರ ವಾರಸುದಾರರ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಈ ದಾವೆಯ ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳು ಸದರಿ ಲಂಬಾಣಿ ಸಣ್ಯಾ ನಾಯ್ಕನ ವಾರಸುದಾರರು ಎಂದರೆ ಸರಿ. ವಾದಿಗಳು ಈ ದಾವೆಯನ್ನು 3 ಆಸ್ತಿಗಳ ಬಗ್ಗೆ ಸಲ್ಲಿಸಿದ್ದಾರೆ. ದಾವಾ ಐಟಂ ನಂ. 2 ರಲ್ಲಿರುವ ಸ. ನಂ. 267 ರಲ್ಲಿ 26 ಎಕರೆ 62 ಸೆಂಟ್ಸ್ ಜಮೀನನ್ನು ನಾನು ನೋಡಿದ್ದೇನೆ. ಐಟಂ ನಂ. 2 ರಲ್ಲಿ ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳು ಜಂಟಿಯಾಗಿ ಉಳುಮೆ ಮಾಡಿಕೊಂಡು ಅನುಭೋಗ ಮಾಡುತ್ತಿದ್ದಾರೆ ಎಂದರೆ ಸರಿ. ಐಟಂ ನಂ. 3 ರಲ್ಲಿರುವ ಸ. ನಂ. 276 ರಲ್ಲಿ 16 ಎಕರೆ 40 ಸೆಂಟ್ಸ್ ಕೂಡ ಮೂಲತಃ ಲಂಬಾಣಿ ಸಣ್ಯಾ ನಾಯ್ಕನಿಗೆ ಸೇರಿತ್ತು ಎಂದರೆ ಸರಿ. ಐಟಂ ನಂ. 3 ರಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ರೇಷ್ಮೆ ಬೆಳೆ ಇಟ್ಟು ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಹತ್ತೂವರೆ ಎಕರೆ ಜಮೀನು ಬಿಟ್ಟು ಉಳಿದ ವಿಸ್ತೀರ್ಣದಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಸ್ವಾಧೀನ ಹೊಂದಿದ್ದಾರೆ. ಐಟಂ ನಂ. 3 ರಲ್ಲಿ 3 ನೇ ವಾದಿ ಮತ್ತು 6 ರಿಂದ 13 ನೇ ವಾದಿಗಳು, 16 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳೂ ಕೂಡ ಸ್ವಾಧೀನ ಹೊಂದಿದ್ದಾರೆ ಎಂದರೆ ಹತ್ತೂವರೆ ಎಕರೆ ಬಿಟ್ಟು ಉಳಿದಿದ್ದರಲ್ಲಿ ಸ್ವಾಧೀನ ಹೊಂದಿದ್ದಾರೆ.

03. 27 ನೇ ಪ್ರತಿವಾದಿ ದಂಡಿನ ಗುಂಡೂರಾವ್ ರವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 27 ನೇ ಪ್ರತಿವಾದಿ ಅಥವಾ ಆತನ ಯಾವುದೇ ವಾರಸುದಾರರು ನಮ್ಮ ಊರಿನಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿ. ಐಟಂ ನಂ. 3 ರಲ್ಲಿ ಇವತ್ತಿನವರೆಗೂ ಲಂಬಾಣಿ ಸಣ್ಯಾ ನಾಯ್ಕನ ವಾರಸುದಾರರೇ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದು ನಾನು ಯಾವತ್ತೂ ಅದರ ಸ್ವಾಧೀನದಲ್ಲಿ ಇಲ್ಲವೆಂದರೆ ಸರಿಯಲ್ಲ. ಅವರ ಕುಟುಂಬದಲ್ಲಿ ಪಾಲುವಿಭಾಗ ಆಗಿರಲಿಲ್ಲವಾದ್ದರಿಂದ ಹೊಸನ್ಯಾ ನಾಯ್ಕನಿಗೆ ಐಟಂ ನಂ. 3 ರಲ್ಲಿ ಹತ್ತೂವರೆ ಎಕರೆಯನ್ನು ನಮಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹೊಸನ್ಯಾ ನಾಯ್ಕನ ಹೆಸರಿನಲ್ಲಿ ನಮ್ಮ ತಂದೆಯು ಕ್ರಯ ಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ. ನಂ. 276 ರ ಪಹಣಿಯಲ್ಲಿ ನನ್ನ ತಂದೆಯ ಅಥವಾ ನನ್ನ ತಾಯಿಯ ಹೆಸರಿನ ಮುಂದೆ ನಿರ್ದಿಷ್ಟವಾದ ವಿಸ್ತೀರ್ಣ ಯಾವುದೂ ನಮೂದು ಆಗಿಲ್ಲ ಎಂದರೆ ಪಹಣಿ ಜಂಟಿಯಾಗಿರುತ್ತದೆ, ಪ್ರತ್ಯೇಕಗೊಂಡಿರುವುದಿಲ್ಲ. ನಾನು ಕ್ರಯ ಪತ್ರದ ಪ್ರಕಾರ ಪಹಣಿಯಲ್ಲಿ ವಿಸ್ತೀರ್ಣ ನಮೂದಿಸಿ ಕೊಡುವಂತೆ ಯಾವತ್ತೂ ಕೇಳಿಲ್ಲ ಎಂದರೆ ತಹಶೀಲ್ದಾರರನ್ನು ಮತ್ತು ರಾಮಾ

ನಾಯ್ಕುನ ಮಕ್ಕಳನ್ನು ಕೂಡ ಕೇಳಿದ್ದೆ. ತಹಶೀಲ್ದಾರರು ಸರ್ಕಾರದಿಂದ ಪೋಡಿ ಆದೇಶ ಆಗಿದೆ, ಮಾಡಿ ಕೊಡುತ್ತೇವೆ ಎಂದು ಹೇಳಿದ್ದರು. ರಾಮಾ ನಾಯ್ಕುನ ಮಕ್ಕಳು ಮಾಡಿಕೊಡೋಣ ಎಂದು ಹೇಳಿದ್ದರು. ನಾನು ಯಾವತ್ತೂ ಪಹಣಿ ನಮೂದು ಮಾಡಿಸಿಕೊಡುವಂತೆ ಕೇಳದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ. 3 ರಲ್ಲಿರುವ 16 ಎಕರೆ 40 ಸೆಂಟ್ಸ್ ಜಮೀನು ಉತ್ತರದಿಂದ ದಕ್ಷಿಣಕ್ಕೆ ಒಂದೇ ಪಟ್ಟಿಯಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮಕ್ಕೆ ದಾದಾಪುರ ಗ್ರಾಮದ ಮುಖ್ಯ ರಸ್ತೆ ಇದೆ ಎಂದರೆ ಸರಿ. ಉಳಿದ ದಿಕ್ಕುಗಳಾದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಕಡೆಗೆ ಬೇರೆ ಬೇರೆ ಜಮೀನುಗಳಲ್ಲಿ ತುಂಬಾ ಜನ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಆ ರೀತಿ ತುಂಬಾ ಜನ ಸಾಗುವಳಿ ಮಾಡುತ್ತಾ ಇರುವುದರಿಂದ ನಿರ್ಧಿಷ್ಟವಾಗಿ ಇಂತಹ ವ್ಯಕ್ತಿಗಳೇ ಸಾಗುವಳಿ ಮಾಡುತ್ತಿದ್ದಾರೆಂದು ಗುರುತಿಸುವುದು ಕಷ್ಟ ಎಂದರೆ ಸರಿ. ಇವತ್ತಿಗೂ ಐಟಂ ನಂ. 3ರ ಆಸ್ತಿಯನ್ನು ಸಂಪೂರ್ಣವಾಗಿ ಲಂಬಾಣಿ ಸಣ್ಯಾ ನಾಯ್ಕುನ ವಾರಸುದಾರರಾದ ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳೇ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದರೂ ಹತ್ತೂವರೆ ಎಕರೆಯಲ್ಲಿ ನಾನು ಸ್ವಾಧೀನ ಹೊಂದಿದ್ದೇನೆಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.